ದಿನಾಂಕಃ **29.10.2025** ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ **G.B.A** ವಕೀಲರಿಂದಃ

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ, ಆದ ಕಾರಣ ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ಚಿಕ್ಕಣ್ಣನವರ ಮಗನಾದ ಕೃಷ್ಣಮೂರ್ತಿಯು ಸುನಂದಮ್ಮನವರ ಮೇಲೆ ಈ ದಾವೆಯನ್ನು ಹೂಡಿರುತ್ತಾರೆ. ಅವರೊಬ್ಬರ ಮೇಲೆ ಬಿಟ್ಟು ಬೇರೆ ಯಾರ ಮೇಲೂ ಈ ದಾವೆಯನ್ನು ಹೂಡಿರುವುದಿಲ್ಲ ಎಂದರೆ ಸರಿ. ಯಾವ ದಾವಾ ಆಸ್ತಿಯ ಸರ್ವೆ ನಂಬರಿನ ಮೇಲೆ ದಾವೆಯನ್ನು ಹೂಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರಕ್ಕೆ 1 ನೇ ವಾದಿಯವರೇ ಎಲ್ಲಾ ಸಂಗತಿಯನ್ನು ನೀಡಿರುತ್ತಾರೆ ಎಂದರೆ ಸರಿ. ವಾದಿಯರು ನ್ಯಾಯಾಲಯಕ್ಕೆ ಯಾವ ದಾಖಲಾತಿಗಳನ್ನು ಹಾಜರುಪಡಿಸಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ನನ್ನ ತಂದೆಯ ಹೆಸರು ಗೋವಿಂದಯ್ಯ. ತಾಯಿಯ ಹೆಸರು ಲಕ್ಷ್ಮಮ್ಮ. ನನ್ನ ತಂದೆಗೆ 6 ಜನ ಮಕ್ಕಳಿದ್ದು ಅವರುಗಳ ಪೈಕಿ 3 ಜನ ಗಂಡು ಮಕ್ಕಳು, 3 ಜನ ಹೆಣ್ಣು ಮಕ್ಕಳು. ಅವರುಗಳ ಹೆಸರು 1 ನೇ ಓಬಳಯ್ಯ, 2 ನೇ ಮಾಳಮ್ಮ, 3 ನೇ ಚಿಕ್ಕಣ್ಣ, 4 ನೇ ಗಿರಿಯಪ್ಪ, 5 ನೇ ನಾನು ಗಂಗಮ್ಮ, 6 ನೇ ಮಹಾದೇವಮ್ಮ ಇರುತ್ತಾರೆ. ಓಬಳಯ್ಯ, ಚಿಕ್ಕಣ್ಣ ಹಾಗೂ ಗಿರಿಯಪ್ಪನವರು ಮರಣ ಹೊಂದಿರುತ್ತಾರೆ. ಓಬಳಯ್ಯನವರ ಪತ್ನಿಯ ಹೆಸರು ಚಿಕ್ಕಮ್ಮನಾಗಿದ್ದು ಅವರು ಜೀವಂತವಿದ್ದಾರೆ. ಮಾಳಮ್ಮನವರು ಜೀವಂತವಿದ್ದಾರೆ ಎಂದರೆ ಸರಿ. ಗಿರಿಯಪ್ಪನವರ ಪತ್ನಿಯು ಜೀವಂತವಿದ್ದಾರೆ ಎಂದರೆ ಸರಿ. ಮಹಾದೇವಮ್ಮನವರು ಜೀವಂತವಿದ್ದಾರೆ ಎಂದರೆ ಸರಿ. ಅವರುಗಳನ್ನೆಲ್ಲಾ ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿ ದಾವೆಯನ್ನು ಹೂಡಿದ್ದಾರೋ ಇಲ್ಲವೋ ಎಂಬುದನ್ನು ನಾನು ತಿಳಿದುಕೊಂಡಿರುವುದಿಲ್ಲ. ನಾವೆಲ್ಲರೂ ಒಟ್ಟು ಕುಟುಂಬದ ಸದಸ್ಯರು ಎಂದರೆ ಸರಿ. ಈ ದಾವೆಯನ್ನು ಈ ಎಲ್ಲಾ ವ್ಯಕ್ತಿಗಳನ್ನು ಸೇರಿಸಿಲ್ಲದ ಕಾರಣ ದಾವೆಯು ಊರ್ಜಿತಗೊಳ್ಳುವುದಿಲ್ಲ ಎಂದರೆ ಸಾಕ್ಷಿಯು ಮೇಲೆ ಹೇಳಿರುವ ನನ್ನ 3 ಜನ ಸಹೋದರರು ಕುಟುಂಬದ ಆಸ್ತಿಯಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ. ಆದ ಕಾರಣ ನಾವು 3 ಜನ ಹೆಣ್ಣು ಮಕ್ಕಳು ಮದುವೆಯಾಗಿ ಬೇರೆ ಇದ್ದೇವೆ ಎಂದು ನುಡಿಯುತ್ತಾರೆ.

ನಮ್ಮ ಕುಟುಂಬಕ್ಕೆ ಸೇರಿದ ಹಾಗೆ ಸುಮಾರು 7 ಎಕರೆ 16 ಗುಂಟೆ ಆಸ್ತಿ ಇರುತ್ತದೆ. ನನ್ನ ಸಹೋದರರು ವಿಭಾಗ ಮಾಡಿಕೊಂಡ ವಿಷಯ ನಮಗೆ ತಿಳಿದಿದೆ, ಆ ಸಮಯದಲ್ಲಿ ನಾವು ಮದುವೆಯಾಗಿ ಗಂಡನ ಮನೆಯಲ್ಲಿ ವಾಸವಿದ್ದೆವು. ಸದರಿ ವಿಭಾಗವು ಸುಮಾರು 20 ರಿಂದ 25 ವರ್ಷಗಳ ಹಿಂದೆ ಆಗಿರುತ್ತದೆ. ಸದರಿ ವಿಭಾಗವಾಗುವ ಸಮಯದಲ್ಲಿ ನಾನು ಅಲ್ಲೇ ಇದ್ದೆ. ಪ್ರತಿಯೊಬ್ಬರಿಗೂ 1 ಎಕರೆ 18 ಗುಂಟೆ ಆಸ್ತಿಯಂತೆ ನಮ್ಮ 3 ಜನ ಸಹೋದರರು ವಿಭಾಗ ಮಾಡಿಕೊಂಡಿರುತ್ತಾರೆ. ನಾನು ಅವರ ಹೆಸರಿಗೆ ಬಂದಿರುವ ಯಾವುದೇ ಪಹಣಿಯನ್ನು ನೋಡಿರುವುದಿಲ್ಲ. 1 ನೇ ವಾದಿಯ ಮದುವೆಯ ಸಮಯದಲ್ಲಿ ಲಗ್ನಪತ್ರಿಕೆಯನ್ನು ಏನಾದರೂ ಹಂಚಿದ್ದರಾ ಎಂದು ಕೇಳಿದಾಗ ಸಾಕ್ಷಿಯು ಆ ಸಮಯದಲ್ಲಿ ಯಾರೂ ಲಗ್ನಪತ್ರಿಕೆಯನ್ನು ಹಂಚುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಚಿಕ್ಕಣ್ಣ ಮತ್ತು ಗಂಗಮ್ಮನವರು ಮದುವೆಯಾಗಿ ಸುಮಾರು 40 ರಿಂದ 45 ವರ್ಷಗಳಾಗಿರುತ್ತದೆ. ಅಂದಿನ ಕಾಲದಲ್ಲೂ ಸಹ ಲಗ್ನಪತ್ರಿಕೆಗಳನ್ನು ಹಂಚುತ್ತಿದ್ದು ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ಸದರಿಯವರ ಮದುವೆಯು ಕರಡಾಳು ಸಂತೆಯಲ್ಲಿ ಆಗಿರುತ್ತದೆ. 1 ನೇ ವಾದಿಯು ನೊಣವಿನಕೆರೆ ಹೋಬಳಿಯ ಬೋಚಿಹಳ್ಳಿ ಗ್ರಾಮದ ನಿವಾಸಿ ಎಂದರೆ ಸರಿ. ಗಂಗಮ್ಮನವರದ್ದು ಸಹ ಬೋಳಿಹಳ್ಳಿಗ್ರಾಮ. ಸದರಿಯವರ ಮದುವೆಯ ಸಮಯದಲ್ಲಿ ನನ್ನ 3 ಜನ ಸಹೋದರರು, 2 ಸಹೋದರಿಯರು ಹಾಗೂ ಎಲ್ಲರೂ ಸೇರಿದ್ದೆವು. ಗಂಗಮ್ಮನವರ ಕಡೆಯಿಂದ ಅವರ ತಾಯಿಯರು ಇದ್ದರು, ಅವರ ಹೆಸರು ನನಗೆ ಗೊತ್ತಿಲ್ಲ. ಆ ಮದುವೆಯ ಸಮಯದಲ್ಲಿ ಕರಡಾಳು ಗಿರಿಯಪ್ಪ ಎಂಬುವವರು ಪುರೋಹಿತರಾಗಿದ್ದರು. ಅವರದ್ದು ಕರಡಾಳು ಗ್ರಾಮ, ಅವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ನನ್ನ ತಂದೆಯವರಾದ ಗೋವಿಂದಯ್ಯನವರು ಹಾರೋಘಟ್ಟದಲ್ಲಿದ್ದು ಅದಾದ ಬಳಿಕ ಕರಡಾಳಿನ ಸಂತೆಯ ಹತ್ತಿರ ಅವರ ಜಮೀನು ಇದ್ದು ಅಲ್ಲಿಯೇ ಅವರು ಮನೆಯನ್ನು ಕಟ್ಟಿಕೊಂಡು ವಾಸವಿರುತ್ತಾರೆ. ಸದರಿ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ನನ್ನ ತಂದೆಯವರು ಕರಡಾಳು ಸಂತೆಯಲ್ಲೇ ಮರಣ ಹೊಂದಿರುತ್ತಾರೆ. ನನ್ನ 3 ಜನ ಸಹೋದರರು ಎಂದಿಗೂ ಕುಟುಂಬದ ಆಸ್ತಿಯಲ್ಲಿ ವಿಭಾಗವನ್ನು ಮಾಡಿಕೊಂಡಿರುವುದಿಲ್ಲ, ಇಂದಿಗೂ ಸಹ ಅವರು ಕುಟುಂಬದ ಆಸ್ತಿಯಲ್ಲೇ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ 3 ಜನ ಸಹೋದರರು ವಿಭಾಗವನ್ನು ಮಾಡಿಕೊಂಡು ಅವರವರ ಆಸ್ತಿಯಲ್ಲಿ ವಿಭಾಗ ಇದ್ದಾರೆ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಮಾಳಮ್ಮ, ನಾನು ಗಂಗಮ್ಮ ಮತ್ತು ಮಹಾದೇವಮ್ಮನವರನ್ನು ಪಕ್ಷಗಾರರನ್ನಾಗಿ ಸೇರಿಸಿಲ್ಲವಾದ ಕಾರಣ ಈ ದಾವೆಯು ಊರ್ಜಿತವಲ್ಲದ ಕಾರಣ ಸೇರಿಸಿಲ್ಲ ಎಂದರೆ ಸರಿಯಲ್ಲ. ಚಿಕ್ಕಣ್ಣನವರಿಗೆ ತಿಮ್ಮಮ್ಮ ಎಂಬ 1 ನೇ ಪತ್ನಿ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ತಿಮ್ಮಮ್ಮನವರು 2 ನೇ ಪತ್ನಿಯಾಗಬೇಕು, ಅವರಿಗೆ ಇಬ್ಬರು ಹೆಂಡತಿಯರು ಇದ್ದರು ಎಂದು ನುಡಿಯುತ್ತಾರೆ. ಸದರಿ ಚಿಕ್ಕಣ್ಣನವರು ಗಂಗಮ್ಮನವರನ್ನು ಎಂದಿಗೂ ಮದುವೆಯಾಗಿರುವುದಿಲ್ಲ, ಆದ್ದರಿಂದ ಅವರಿಬ್ಬರ ನಡುವೆ ಯಾವುದೇ ರೀತಿ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ತಿಮ್ಮಮ್ಮನವರಿಗೆ 1 ಮತ್ತು 2 ನೇ ಪ್ರತಿವಾದಿಗಳು ಮಕ್ಕಳು ಎಂದರೆ ಸರಿ. ಸದರಿ ತಿಮ್ಮಮ್ಮನವರು ಈ ದಾವೆಯ ಆಸ್ತಿಯನ್ನು ತಿಮ್ಮಮ್ಮ 1 ಮತ್ತು 2 ನೇ ಪ್ರತಿವಾದಿಗಳು ಸೇರಿಕೊಂಡು 3 ನೇ ಪ್ರತಿವಾದಿಗೆ ಕ್ರಯಕ್ಕೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಆದ ಕಾರಣ ಈ ದಾವೆಯಲ್ಲಿ ವಾದಿಗಳಿಗೆ ಯಾವುದೇ ಭಾಗಾಂಶದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಎಂದಿಗೂ ಚಿಕ್ಕಣ್ಣ ಹಾಗೂ ಗಂಗಮ್ಮನವರ ಮದುವೆಗೆ ಹೋಗಿರುವುದಿಲ್ಲ ಹಾಗೂ ನೋಡಿರುವುದಿಲ್ಲ, ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಯಜಮಾನರದ್ದು ಮಣಕೀಕೆರೆ ಗ್ರಾಮ. ಅದು ತಿಪಟೂರು ತಾಲ್ಲೂಕಿಗೆ ಬರುತ್ತದೆ. ನಾನು ಹಾಗೂ ನನ್ನ ಮಕ್ಕಳು ಕರಡಾಳು ಸಂತೆಯಲ್ಲಿ ವಾಸವಿದ್ದೇವೆ. ನಾನು ಇಂದಿಗೂ ಸಹ ಮಣಕೀಕೆರೆ ಗ್ರಾಮದಲ್ಲೇ ವಾಸವಿದ್ದೇವೆ ಹಾಗೂ ಕರಡಾಳಿನಲ್ಲಿ ವಾಸವಿಲ್ಲ ಎಂದರೆ ಸರಿಯಲ್ಲ. ಬೋಚಿಹಳ್ಳಿಯಿಂದ ಮಣಕೀಕೆರೆಗೆ ಸುಮಾರು 8 ರಿಂದ 10 ಕಿ.ಮೀ ದೂರವಿದೆ. ಚಿಕ್ಕಣ್ಣನವರು ತೀರಿಕೊಂಡ ಬಳಿಕ 1 ಮತ್ತು 2 ನೇ ಪ್ರತಿವಾದಿಯರೇ ಅಂತಿಮ ಸಂಸ್ಕಾರವನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ವಾದಿಯರು ಸಹ ಅಲ್ಲಿಗೆ ಬಂದು ಮಾಡಿರುವುದಾಗಿ ನುಡಿಯುತ್ತಾರೆ. ವಾದಿಯರು ಎಂದಿಗೂ ಸಹ ಚಿಕ್ಕಣ್ಣನವರ ಅಂತಿಮ ಸಂಸ್ಕಾರವನ್ನು ಮಾಡಿರುವುದಿಲ್ಲ, ಅದೇ ರೀತಿ ನಾನು ಅವರು ತೀರಿಕೊಂಡಾಗ ಹೋಗಿರುವುದಿಲ್ಲ ಎಂದರೆ

ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಚಿಕ್ಕಣ್ಣನವರ ಒಬ್ಬರೇ ಹೆಂಡತಿಯಾದ ತಿಮ್ಮಮ್ಮನವರ ಮಕ್ಕಳು ಎಂದರೆ ಸಾಕ್ಷಿಯು ಚಿಕ್ಕಣ್ಣನವರಿಗೆ ಇಬ್ಬರು ಪತ್ನಿಯರು ಇದ್ದರು ಎಂದು ನುಡಿಯುತ್ತಾರೆ. ದಾವೆಯ ಬಗ್ಗೆ ನನಗೆ ಯಾವುದೇ ಖುದ್ದು ಮಾಹಿತಿ ಇಲ್ಲದಿದ್ದರೂ 1 ನೇ ವಾದಿಯು ಹೇಳಿ ಕೊಟ್ಟಿರುವ ಹಾಗೇ ನಾನು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಸಹಿ/-
ಅಧಿಕ ಸಿವಿಲ್ ನ್ಯಾಯಾಧೀಶರು,
ತಿಪಟೂರು.